## ಪ್ರಾಣೇಶ್ ತನ್ನ ಮಗನನ್ನು ಅವನಿದ್ದಂತೆಯೇ ಒಪ್ಪಿಕೊಳ್ಳಲು, ಹೆಂಡತಿಯ ಎಲ್ಲಾ ಬೇಡಿಕೆಗಳಿಗೆ ಅಸ್ತು ಎನ್ನಲು, ಗತಕಾಲದ ಗೆಳತಿ ಜಸ್ಸಿಗೆ ಫೋನ್ ಮಾಡಿ ಅಳಲು ಕಾರಣವೇನು?

ಜೋರಾಗಿ ಉಚ್ಚೆ ಬಂದಂತಾಗಿ ಪ್ರಾಣೇಶನಿಗೆ ಎಚ್ಚರವಾಯಿತು. ಪ್ರಾಣೇಶ ಕೈಯಲ್ಲಿರುವ ಆ್ಯಪಲ್ ವಾಚ್ ನೋಡಿದ. ಆಗಲೇ ಬೆಳಗಿನ ಹನ್ನೊಂದು ಗಂಟೆಯಾಗಿತ್ತು. ತಲೆ ಧಿಮಿಧಿಮಿ ಎಂದು ನೋಯುತ್ತಿತ್ತು. ದರಿದ್ರ ಹ್ಯಾಂಗೋವರು! ಎಷ್ಟು ಪೆಗ್ ಕುಡಿದೆ? ಮೂರು, ನಾಲ್ಕು, ಆರು... ನೆನಪಾಗಲಿಲ್ಲ. ರಾತ್ರಿಯೂಟಕ್ಕೆ ಕೂತಾಗ ಹೆಂಡತಿ ಪದ್ಮಜಾ, ''ನಾಳೆ ಸಂಜೆಯಿಂದ ಮಧ್ಯರಾತ್ರಿಯವರೆಗೂ ಪಾರ್ಟಿ ಇದೆ, ಫ್ರೆಷ್ ಇರಬೇಕು. ಅಪ್ಪ ಮಗ ತುಂಬ ಹೊತ್ತು ಮಾತಾಡುತ್ತ, ರಾತ್ರಿಯೆಲ್ಲ ಕುಡಿಯುತ್ತ ಕಳೆಯಬೇಡಿ, ನಾಳೆಯ ಪಾರ್ಟಿಯನ್ನು ಹಾಳು ಮಾಡಬೇಡಿ'' ಎಂದು ತಾಕೀತು ಮಾಡಿಯೇ ಬೆಡ್‌ರೂಮಿಗೆ ಹೋಗಿದ್ದಳು. ಆದರೂ ತಾನು ಮತ್ತು ಮಗ ರಾತ್ರಿ ಮಾತಾಡುತ್ತ ಕೂತಿದ್ದು, ಮಗ ಎದ್ದು ಹೋದ ಮೇಲೂ ತಾನು ಒಬ್ಬನೇ ಕುಡಿಯುತ್ತ ಕೂತಿದ್ದು ನೆನಪಾಯಿತು. ಆದರೆ, ಯಾವಾಗ ಮಲಗಿದ್ದು ಎನ್ನುವುದು ಮಾತ್ರ ನೆನಪಾಗಲಿಲ್ಲ. ನೋಡಿದರೆ ಹಾಲ್‌ನ ಸೋಫಾದಲ್ಲೇ ನಿದ್ದೆ ಹೋಗಿದ್ದ!

ಪ್ರಾಣೇಶ, ಡಾ. ಪ್ರಾಣೇಶಾಚಾರ್ಯ ಕಟ್ಟಿ, ಮೂಲತಃ ಬಾಗಲಕೋಟೆಯವನು. ಕಳೆದ 27 ವರ್ಷಗಳಿಂದ ಇಂಗ್ಲೆಂಡಿನಲ್ಲಿದ್ದಾನೆ. ಆತ ಸ್ತನದ ಶಸ್ತ್ರಚಿಕಿತ್ಸಕ. ಸರಕಾರಿ ಆಸ್ಪತ್ರೆಯಲ್ಲಿ ಕನ್ಸಲ್‌ಟಂಟ್ ಕೆಲಸ. ಚಿಕ್ಕ ಸ್ತನಗಳಿರುವವರಿಗೆ ದೊಡ್ಡ ಸ್ತನಗಳ ಆಸೆ, ದೊಡ್ಡವಿರುವವರಿಗೆ ಚಿಕ್ಕವಾಗಿಸುವ ಆಸೆ. ಆದರೆ, ಈ ಸೌಲಭ್ಯ ಸರಕಾರಿ ಆರೋಗ್ಯದಡಿಯಲ್ಲಿ ಎಲ್ಲರಿಗೂ ಇಲ್ಲದೇ ಇರುವುದರಿಂದ ಚಿಕ್ಕದು ದೊಡ್ಡದಾಗಿಸುವ ಈ ಕೆಲಸ ಖಾಸಗಿಯಾಗಿಯೇ ಆಗಬೇಕು. ಹೀಗಾಗಿ ಪ್ರಾಣೇಶನಿಗೆ ಕೈತುಂಬ ಪ್ರೈವೇಟ್ ಪ್ರ್ಯಾಕ್ಟೀಸು. ಸಂಬಳದ ಹೊರತಾಗಿ ವಾರಕ್ಕೆ ಸಾವಿರಾರು ಪೌಂಡುಗಳ ಗಳಿಕೆಯಾಗುತ್ತಿತ್ತು. ಹೆಂಡತಿ ಪದ್ಮಜಾ ಮತ್ತು ಯುನಿವರ್ಸಿಟಿಯಲ್ಲಿ ಓದುತ್ತಿರುವ ಒಬ್ಬನೇ ಮಗ, ಸತ್ಯಬೋಧ. ಬರ್ಮಿಂಗ್‌ಹ್ಯಾಮ್ ನಗರದ ಪ್ರಸಿದ್ಧ ಎಡ್ಜ್‌ಬ್ಯಾಸ್ಟನ್ ಬಡಾವಣೆಯಲ್ಲಿ ಎರಡು ಮಿಲಿಯನ್ ಪೌಂಡುಗಳ ಭವ್ಯ ಮನೆ. ಮಲ್ಟಿಮಿಲಿಯನೇರ್.

ಸಿಡಿಯುತ್ತಿರುವ ತಲೆ ಮತ್ತು ಒತ್ತುತ್ತಿರುವ ಮೂತ್ರವನ್ನು ಶಪಿಸಿಕೊಳ್ಳುತ್ತ ಪ್ರಾಣೇಶ ಎರಡು ಪ್ಯಾರಾಸಿಟಮಾಲ್ ನುಂಗಿಯೇ ಬಾತ್‌ರೂಮಿಗೆ ಹೊರಟ. ಪದ್ಮಜಾಳ ಕಿವಿ ಚುರುಕು; ಪ್ರಾಣೇಶ ನಿದ್ದೆಯಿಂದ ಎದ್ದ ಶಬ್ದ ಕೇಳಿ ಅಡುಗೆಮನೆಯಿಂದಲೇ, "ಪ್ರಾಣೂ, ಎಷ್ಟೊತ್ತು ಮಲಗುವದು? ಇವತ್ತು ಯಾವ ದಿನ ಅಂತ ಗೊತ್ತಿಲ್ಲವೇ? ಹ್ಯಾಪಿ ಆ್ಯನಿವರ್ಸರಿ! ಬೇಗ ಸ್ನಾನ ಮಾಡಿ ಬಾ, ದೇವರಿಗೆ ಒಂದು ಊದಿನಕಡ್ಡಿಯಾದರೂ ಹಚ್ಚು" ಎಂದು ಬಯ್ದು, "ಸತ್ಯ (ಮಗ ಸತ್ಯಬೋಧ) ಎಲ್ಲಿ? ಫೋನು ಮಾಡಿದರೆ ಫೋನಿಗೆ ಕೂಡ ಸಿಗುತ್ತಿಲ್ಲ" ಎಂದು ಕೂಗಿದಳು. "ಗೆಳೆಯನ ಜೊತೆ ಬಂದಿದ್ದಾನೆ,